# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 21 | Pages. 2 | Date: 17-12-2025, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 21 - ಪುಟಗಳು : 2 | 17-12-2025 | ಬುಧವಾರ | Ph: 8762954248 | ದರ : ₹1


# ಹಾಸನ ವೈಭವದ ಪ್ರತೀಕ ದನಗಳ ಜಾತ್ರೆ ಆರಂಭ

## ಡಿ. 28ರ ವರೆಗೆ ರಾಸುಗಳ ಪ್ರದರ್ಶನ | ಶಾಸಕ ಹೆಚ್.ಪಿ. ಸ್ವರೂಪ್ ಸಹಕಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬ್ರಿಟಿಷರ ಆಡಳಿತಾವಧಿಯಲ್ಲಿ ಪ್ರಾರಂಭವಾಗಿ ಹಾಸನದ ಸಾಂಸ್ಕೃತಿಕ ವೈಭವವನ್ನು ನಾಡಿಗೆ ಪರಿಚಯಿಸಿದ ದನಗಳ ಜಾತ್ರೆ ವರ್ಷಗಳುರುಳಿದಂತೆ ನೇಪಥ್ಯಕ್ಕೆ ಸರಿಯುತ್ತಿದ್ದು, ಪರಂಪರೆ ಮುಂದುವರಿಸಬೇಕೆಂಬ ಉದ್ದೇಶದಿಂದ ಶಾಸಕ ಹೆಚ್.ಪಿ.ಸ್ವರೂಪ್ ಈ ವರ್ಷ ಜಾತ್ರೆಗೆ ಮುತುವರ್ಜಿ ವಹಿಸಿದ್ದಾರೆ.

ಶಾಸಕರ ಮಾರ್ಗದರ್ಶನ:

ಡಿ. 15 ರಿಂದ 28ರ ವರೆಗೆ ಐತಿಹಾಸಿಕ ದನಗಳ ಜಾತ್ರೆ ಆರಂಭವಾಗಿದೆ. ಮಹಾನಗರ ಪಾಲಿಕೆ ಹಿಂಭಾಗದ ಗೊರೂರು ರಸ್ತೆಯ ಖಾಲಿ ಜಾಗದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ 100ಕ್ಕೂ ಹೆಚ್ಚು ಜಾನುವಾರುಗಳು ಜಮಾವಣೆಯಾಗಿದ್ದು ರಾಸುಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವ ಸಾಧ್ಯತೆಯಿದೆ. ರೈತರು ಶಾಮಿಯಾನ ಹಾಕುವ ಹಾಗೂ ಮೇವು ಸಂಗ್ರಹಣಾ ಕಾರ್ಯದಲ್ಲಿ ನಿರತರಾಗಿದ್ದಾರೆ.



ಶಾಸಕ ಹೆಚ್.ಪಿ.ಸ್ವರೂಪ್ ಅವರ ಮಾರ್ಗದರ್ಶನದಲ್ಲಿ ಜಾನುವಾರುಗಳಿಗೆ ಕುಡಿಯುವ ನೀರು, ಮೇವು, ಬೆಳಕಿನ ವ್ಯವಸ್ಥೆ ಹಾಗೂ ದೂಳು ನಿಯಂತ್ರಣಕ್ಕೆ ಟ್ರ್ಯಾಕ್ಟರ್ ಮೂಲಕ ನೀರು ಸಿಂಪಡಿಸಲಾಗುತ್ತಿದೆ.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಭಾಗವಹಿಸಿರುವ ಹಿನ್ನೆಲೆಯಲ್ಲಿ ಅವರ ತಾಯಿ ಲಲಿತಾ ಪ್ರಕಾಶ್ ಅವರು ಸೋಮವಾರ ಸಂಜೆ ದನಗಳ ಜಾತ್ರಾ ಮೆರವಣಿಗೆಗೆ ಹಾಸನಾಂಬ ದೇವಾಲಯದ ಮುಂದೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪತಿ ದಿ. ಮಾಜಿ ಶಾಸಕ ಹೆಚ್.ಎಸ್.ಪ್ರಕಾಶ್ ಅವರ ಅವಧಿಯಲ್ಲಿ ಹಾಸನದ ದನಗಳ ಜಾತ್ರೆಗೆ ವಿಶೇಷ ಮೆರುಗು ಬಂದಿತ್ತು. ಕಾರಣಾಂತರಗಳಿಂದ ನಂತರದ ವರ್ಷಗಳಲ್ಲಿ ದನಗಳ ಜಾತ್ರೆ ತೆರೆ ಮರೆಗೆ ಸರಿದಿತ್ತು. ಈಗ ಪುತ್ರ ಹಾಗೂ ಶಾಸಕ ಹೆಚ್.ಪಿ.ಸ್ವರೂಪ್ ಜಾತ್ರೆಗೆ ಚಾಲನೆ ನೀಡಿರುವುದು ಸಂತಸ ತಂದಿದೆ ಎಂದರು.

ರೈತ ಪುಟ್ಟರಾಜ್ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ನಿಂತು ಹೋಗಿದ್ದ ದನಗಳ ಜಾತ್ರೆ ಮತ್ತೆ ಆರಂಭವಾಗಿದೆ. ಅದಕ್ಕಾಗಿ ಶಾಸಕರು ಮುತುವರ್ಜಿ ವಹಿಸಿ ಎಲ್ಲಾ ರೀತಿಯ ಅಗತ್ಯ ಸಿದ್ಧತೆ ಮಾಡಿಕೊಟ್ಟಿದ್ದು, ಮೂಲಭೂತ ಸೌಕರ್ಯಗಳ ಕೊರತೆ ಆಗದಂತೆ ಕಾಳಜಿ ವಹಿಸಿದ್ದಾರೆ ಎಂದರು.

### ವ್ಯಾಪಾರ ಕೇಂದ್ರವಲ್ಲ-ಸಂಸ್ಕೃತಿಯ ಪ್ರತೀಕ

ಹಾಸನದ ದನಗಳ ಜಾತ್ರೆಗೆ 120 ವರ್ಷಗಳ ಇತಿಹಾಸವಿದೆ. 1902-04ರ ಬ್ರಿಟಿಷರ ಕಾಲದಲ್ಲಿ ಆರಂಭವಾಗಿ ರಾಜ್ಯಾದ್ಯಂತ ಹೆಸರುವಾಸಿಯಾಗಿತ್ತು. ಅಂದಿನ ಜಿಲ್ಲಾಧಿಕಾರಿ ವೆದಿರಾಲ್ ಮತ್ತು ಉಪವಿಭಾಗಾಧಿಕಾರಿ ಅಪ್ಪಣ್ಣಯ್ಯ ಅವರ ಆಸಕ್ತಿಯಿಂದ ಜಾತ್ರೆಗೆ ಚಾಲನೆ ಸಿಕ್ಕಿತ್ತು. ಹಾಸನದ ದನಗಳ ಜಾತ್ರೆ ಕೇವಲ ವ್ಯಾಪಾರ ಕೇಂದ್ರವಾಗದೆ ಸಂಪ್ರದಾಯದ ಆಚರಣೆಯೂ ಆಗಿತ್ತು. ಹಾಸನದಲ್ಲಿ ತಿಂಗಳುಗಳ ಕಾಲ ದನಗಳೊಟ್ಟಿಗೆ ಇರುತ್ತಿದ್ದ ರೈತರು ನಂತರ ಚುಂಚನಕಟ್ಟೆ ಜಾತ್ರೆಗೆ ತೆರಳುವುದು ಅಲಿಖಿತ ನಿಯಮವಾಗಿತ್ತು. ಹಾಸನದ ಜನರು ರಾಸುಗಳ ಜಾತ್ರೆಯನ್ನು ಸಂಭ್ರಮಿಸುತ್ತಿದ್ದರು. ಪಕ್ಕದ ಮಂಡ್ಯ, ತುಮಕೂರು, ರಾಮನಗರ, ದಾವಣಗೆರೆ, ಚಿಕ್ಕಮಗಳೂರು ಜಿಲ್ಲೆಯ ರೈತರು ತಮ್ಮ ರಾಸುಗಳೊಂದಿಗೆ ಬರುತ್ತಿದ್ದರು.

ಹಲವು ವರ್ಷಗಳ ಕಾಲ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ಹಿಡಿದ ದನಗಳ ಜಾತ್ರೆ ಇತ್ತೀಚಿನ ವರ್ಷಗಳಲ್ಲಿ ತನ್ನ ಪ್ರಭಾವ ಕಳೆದುಕೊಂಡಿತ್ತು. ಗ್ರಾಮೀಣ ಭಾಗದಲ್ಲಿ ಜಾನುವಾರಗಳ ಸಂಖ್ಯೆ ಇಳಿಕೆ, ಆಯೋಜಕರ ನಿರಾಸಕ್ತಿ, ಕೋವಿಡ್ ಹೀಗೆ ನಾನಾ ಕಾರಣಗಳಿಂದ ಜಾತ್ರೆ ತನ್ನ ವೈಭವವನ್ನು ಕಳೆದುಕೊಂಡಿದೆ. ಉತ್ತಮ ರಾಸುಗಳಿಗೆ ಬಹುಮಾನ ನೀಡುವುದು ಇಲ್ಲಿನ ವಿಶೇಷ.

# ಜಿಲ್ಲೆಯ ಅಭಿವೃದ್ಧಿಗಾಗಿ ಕೇಂದ್ರಕ್ಕೆ ಸಂಸದರ ಮೊರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಭಾಗವಹಿಸಿರುವ ಸಂಸದ ಶ್ರೇಯಸ್ ಪಟೇಲ್ ಅವರು ಜಿಲ್ಲೆಯಲ್ಲಿ ಆಗಬೇಕಿರುವ ಅಭಿವೃದ್ಧಿ ಕಾಮಗಾರಿಗೆ ಕೇಂದ್ರ ಸರ್ಕಾರ ನೆರವು ನೀಡಬೇಕು ಎಂದು ಆಗ್ರಹಿಸಿದರು.

ಐಐಟಿಗೆ ಅನುಮೋದನೆ, ಕಡೂರು ಮತ್ತು ಅರಸೀಕೆರೆಯಲ್ಲಿ ತಾಯಿ ಹಾಗೂ ಮಕ್ಕಳ ಆಸ್ಪತ್ರೆ, ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಮತ್ತು ಕಾಡಾನೆ ಹಾವಳಿ ನಿಯಂತ್ರಣಕ್ಕೆ ಕೇಂದ್ರ ಮುಂದಾಗಬೇಕೆಂದು ಒತ್ತಾಯಿಸಿದರು.

ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಸ್ಥಾಪನೆಗಾಗಿ ಅಗತ್ಯವಾದ ಜಾಗವನ್ನು ಈಗಾಗಲೇ ಮೀಸಲಿಡಲಾಗಿದೆ. ಕೇಂದ್ರ ಸರ್ಕಾರವು ತಕ್ಷಣವೇ ಅನುಮೋದನೆ ನೀಡಬೇಕು ಎಂದು ಅಧಿವೇಶನದಲ್ಲಿ ಒತ್ತಾಯಿಸಿದರು.



ಜಿಲ್ಲೆಯಲ್ಲಿ ಕಾಡಾನೆ-ಮಾನವ ಸಂಘರ್ಷ ತೀವ್ರಗೊಂಡಿದೆ. ಕೇಂದ್ರ ಸರ್ಕಾರ ಈ ಸಮಸ್ಯೆಗೆ ಅಂತ್ಯ ಹಾಡಲು ಯೋಜನೆ ರೂಪಿಸಬೇಕು. ಕಳೆದ 21 ವರ್ಷದ ಅವಧಿಯಲ್ಲಿ 75ಕ್ಕೂ ಹೆಚ್ಚು ಜನರು ಕಾಡಾನೆ ದಾಳಿಯಿಂದ ಸಾವನ್ನಪ್ಪಿದ್ದಾರೆ. ಕಾಡಾನೆಗಳ ಹಾವಳಿಯಿಂದ ಅಪಾರ ಪ್ರಮಾಣದ ಬೆಳೆ ಹಾನಿ ಉಂಟಾಗುತ್ತಿದೆ. ಮುಂದಿನ ಕೇಂದ್ರ ಬಜೆಟ್‌ನಲ್ಲಿ ಕಾಡುಪ್ರಾಣಿಗಳಿಂದ ಉಂಟಾಗುವ ನಷ್ಟಕ್ಕೆ ಪರಿಹಾರ ನೀಡಲು ಹಣ ಮೀಸಲಿಡಬೇಕೆಂದು ಒತ್ತಾಯಿಸಿದರು.

ಕಡೂರು ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ಭಾಗದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಆಸ್ಪತ್ರೆ ಮುಂಜೂರು ಮಾಡಬೇಕೆಂದು ಒತ್ತಾಯಿಸಿದ ಅವರು, ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯಿಂದ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಭಾಗದ ಜನರಿಗೆ ನೀರಾವರಿ ಸೌಲಭ್ಯಕ್ಕೆ ಅನುಕೂಲವಾಗಲಿದೆ. ಈ ಹಿಂದೆ ಕೇಂದ್ರ ಸರ್ಕಾರ 5,300 ಕೋಟಿ ರೂ. ಬಿಡುಗಡೆ ಮಾಡುವುದಾಗಿ ಈ ಹಿಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಆದರೆ, ಇವರೆಗೂ ಹಣ ಬಿಡುಗಡೆಯಾಗಿಲ್ಲ. ಕೂಡಲೇ ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

# ಸಂಕಷ್ಟದಲ್ಲಿ ಗುತ್ತಿಗೆದಾರರ ವೃತ್ತಿ: ಪ್ರತಾಪ್ ಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಗುತ್ತಿಗೆದಾರರು ಸಂಕಷ್ಟದಲ್ಲಿದ್ದು ಸರ್ಕಾರ ಕೆಲ ನಿಯಮಗಳನ್ನು ಸರಳೀಕರಣ ಮಾಡಬೇಕೆಂದು ಗುತ್ತಿಗೆದಾರ ಬಾಚಿಹಳ್ಳಿ ಪ್ರತಾಪ್ ಗೌಡ ಆಗ್ರಹಿಸಿದರು.

ಪಟ್ಟಣದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ತಾಲೂಕು ಗುತ್ತಿಗೆದಾರರ ಸಂಘದಿಂದ ಹಮ್ಮಿಕೊಂಡಿದ್ದ 2026ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿ, ಗುತ್ತಿಗೆದಾರರ ಕೆಲಸ ಈ ಹಿಂದಿನಷ್ಟು ಸುಲಭ ಇಲ್ಲ. ಯಾವುದೇ ಸರ್ಕಾರ ಇರಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಕಾಮಗಾರಿ ಮಾಡಲು ಕಮಿಷನ್ ನೀಡಬೇಕಾಗುತ್ತದೆ ಎಂದರು. ಗುತ್ತಿಗೆದಾರರು ತಮ್ಮ ರಂಗದಲ್ಲಿ ಯಶಸ್ವಿಯಾಗಲು ಎಲ್ಲಾ ಕೆಲಸವನ್ನು ಮಾಡಲು ಸಿದ್ಧರಿರಬೇಕು. ಕಾಮಗಾರಿಯ ಎಸ್ಟಿಮೇಟ್, ಡ್ರಾಯಿಂಗ್, ಮಾರ್ಕಿಂಗ್ ಸೇರಿದಂತೆ ಎಲ್ಲಾ ಕೆಲಸದ ಬಗ್ಗೆ



ಅರಿವಿದ್ದಲ್ಲಿ ಯಶಸ್ವಿ ಗುತ್ತಿಗೆದಾರರಾಗಲು ಸಾಧ್ಯ. ಇಂದಿನ ಗುತ್ತಿಗೆ ವ್ಯವಸ್ಥೆಯಲ್ಲಿ ಸರಿಯಾದ ಸಮಯಕ್ಕೆ ಗುತ್ತಿಗೆದಾರರಿಗೆ ಬಿಲ್‌ಗಳು ಪಾವತಿಯಾಗದ ಕಾರಣ ಹಲವಾರು ಗುತ್ತಿಗೆದಾರರು ಶುಗರ್, ಬಿಪಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಅಲ್ಲದೆ ಕೆಲವು ಗುತ್ತಿಗೆದಾರರು ಒತ್ತಡವನ್ನು ಎದುರಿಸಲಾಗದೆ ಕೆಲಸವೇ ಬೇಡವೆಂದು ವಿಮುಖರಾಗುತ್ತಿದ್ದಾರೆ. ಗುತ್ತಿಗೆದಾರರಲ್ಲಿ ಸಂಘಟನೆ ಅಗತ್ಯವಾಗಿದ್ದು ಸಂಘಟನೆ ಇಲ್ಲದಿದ್ದಲ್ಲಿ ಈ ರಂಗದಲ್ಲಿ ಉಳಿಯಲು ಅಸಾಧ್ಯ ಎಂದರು.

ತಾಲೂಕು ಗುತ್ತಿಗೆದಾರರ ಸಂಘದ ಅಧ್ಯಕ್ಷ ವಿಶ್ವನಾಥ್ ಮಾತನಾಡಿ, ಗುತ್ತಿಗೆ ಕೆಲಸ ಮಾಡುವುದು ಬಹಳ ಕಷ್ಟಕರವಾಗಿದೆ. ಕೆಲವೊಂದು ಟೆಂಡರ್‌ಗಳಿಗೆ ನಾವೆಲ್ಲ ಒಟ್ಟಾಗಿ ಟೆಂಡರ್ ಹಾಕಿದರೆ ಹೊರಗಿನ ಗುತ್ತಿಗೆದಾರರು ತಮಗೆ ಬೇಕಾದಂತೆ ದರ ಕೋಟ್ ಮಾಡುವುದರಿಂದ ಸ್ಥಳೀಯರಿಗೆ ಯಾವುದೇ ಕೆಲಸಗಳು ದೊರಕುತ್ತಿಲ್ಲ. ಹೀಗಾಗಿ ಸ್ಥಳೀಯ ಗುತ್ತಿಗೆದಾರರು ಕೆಲಸ ಇಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಗುತ್ತಿಗೆದಾರರ ಸಂಘದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ನೂತನ ಭವನ ನಿರ್ಮಾಣಕ್ಕೆ ಪ್ರತಾಪ್ ಗೌಡರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ತಾಲೂಕು ಗುತ್ತಿಗೆದಾರರ ಸಂಘದ ಸದಸ್ಯ ಕರಗೂರು ರಮೇಶ್, ಪ್ರೇಮ್ ನಾಥ್, ಹೊಸೂರು ರವಿಚಂದ್ರ, ಗುರಪ್ಪ ಗೌಡ, ಅವಿನಾಶ್, ಬಿ.ಕೆ. ಮಹೇಶ್ ಇತರರಿದ್ದರು.

# ಡಿ.18ರಂದು ಬ್ರೈನ್ ಎಕ್ಸ್ ಯೋಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅಭಿಮಾನಿಗಳ ಸಂಘ ಹಾಗೂ ಎನ್‌ಎಸ್‌ಯುಐ ವತಿಯಿಂದ ಮಾಜಿ ಸಂಸದ ಡಿ.ಕೆ ಸುರೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ಡಿಸೆಂಬರ್ 18ರಂದು ಗುರುವಾರ ಬ್ರೈನ್ ಎಕ್ಸ್ ಯೋಗ ರಾಷ್ಟ್ರೀಯ ವಿದ್ಯಾರ್ಥಿ ಕೌಶಲ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಡಿಕೆಶಿ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಅಗಿಲೆ ಗುರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ದಿಕ್ಕು ನೀಡುವ ಉದ್ದೇಶದಿಂದ ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಉಚಿತ ಸ್ಕಾಲರ್‌ಶಿಪ್ ಟೆಸ್ಟ್ ನಡೆಸಲಾಗುತ್ತಿದೆ ಎಂದರು.





ವಿದ್ಯಾರ್ಥಿಗಳ ಶೈಕ್ಷಣಿಕ ಕೌಶಲ ವೃದ್ಧಿ, ಆತ್ಮವಿಶ್ವಾಸ ಹೆಚ್ಚಿಸುವುದು ಹಾಗೂ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸುವುದು ಕಾರ್ಯಕ್ರಮದ ಹಿಂದಿದೆ ಎಂದು ಹೇಳಿದರು.

ಪರೀಕ್ಷೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ 2,000 ರೂಪಾಯಿ ಮೌಲ್ಯದ ಸ್ಕಾಲರ್‌ಶಿಪ್ ಗೆಲ್ಲುವ ಅವಕಾಶ ಕಲ್ಪಿಸಲಾಗಿದೆ ಎಂದರು.


ಕಾರ್ಯಕ್ರಮದಲ್ಲಿ ಅಗಿಲೆ ಗುರು ಹಾಗೂ ಸುಪ್ರೀತ್‌ಗೌಡ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಮುಂದುವರೆಯಲು ಅಗತ್ಯವಾದ ಕೌಶಲ್ಯ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಮತ್ತು ಭವಿಷ್ಯದ ಅವಕಾಶಗಳ ಕುರಿತು ಉಪಯುಕ್ತ ಸಲಹೆ ನೀಡಲಿದ್ದಾರೆ. ಯಾರು ಕಡಿಮೆ ಅವಧಿಯಲ್ಲಿ ನಿಗದಿಪಡಿಸಿ ಪರೀಕ್ಷೆಗಳನ್ನು ಎದುರಿಸಿ ಸಕ್ಸಸ್ ಆಗುತ್ತಾರೋ ಅವರಿಗೆ 2 ಸಾವಿರ ರೂ. ಸ್ಕಾಲರ್‌ಶಿಪ್ ಸಿಗಲಿದೆ. 6ರಿಂದ 10 ನೇ ತರಗತಿ, ಪಿಯುಸಿಯಿಂದ ಪಿಜಿ ಹೀಗೆ ಎರಡು ವಿಭಾಗ ಮಾಡಲಾಗಿದ್ದು, ಹೆಚ್ಚಾಗಿ ಸರ್ಕಾರಿ ಶಾಲೆಗಳ ಮಕ್ಕಳಿಗೆ ಒತ್ತು ನೀಡಲಾಗಿದೆ ಎಂದು ಅವರು ಹೇಳಿದರು.

ಜಿಲ್ಲೆಯ ಎಲ್ಲಾ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಬಹುದಾಗಿದೆ. ಆಸಕ್ತ ವಿದ್ಯಾರ್ಥಿಗಳು 8310110064 ಸಂಖ್ಯೆಗೆ ವಾಟ್ಸಾಪ್ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದೆಂದು ಆಯೋಜಕರು ತಿಳಿಸಿದರು.

ಕಾರ್ಯಕ್ರಮದ ಆಯೋಜಕರಾಗಿ ಅಗಿಲೆ ಗುರು, ಪ್ರಚಾರಕರಾಗಿ ಸುಪ್ರೀತ್ ಗೌಡ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾ/ಯೂತ್ ಕಾಂಗ್ರೆಸ್ ಉಪಾಧ್ಯಕ್ಷ ರಂಗಸ್ವಾಮಿ, ಎನ್‌ಎಸ್‌ಯುಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಣ್ಯ, ರೇಣು ಪ್ರಸಾದ್ ಸೇರಿದಂತೆ ಹಲವು ಮುಖಂಡರು ಹಾಗೂ ವಿವಿಧ ವಿದ್ಯಾರ್ಥಿ ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಹಾಗೂ ಪ್ರಚಾರಕ ಸುಪ್ರೀತ್ ಗೌಡ, ಕಾರ್ಯದರ್ಶಿ ಪವನ್, ಪ್ರಧಾನ ಕಾರ್ಯದರ್ಶಿ ಪುಣ್ಯ, ಕೋ ಆರ್ಡಿನೇಟರ್ ರೇಣುಕಾಪ್ರಸಾದ್ ಇತರರು ಉಪಸ್ಥಿತರಿದ್ದರು.

# ಕಬ್ಬಳಿಯಲ್ಲಿ ಧನುರ್ಮಾಸ ಪೂಜೆಗೆ ಚಾಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬಸವ ಮಾಲೆ ಧರಿಸಿ ಧನುರ್ಮಾಸ ಪೂಜೆಯ ವ್ರತ ಆಚರಿಸಿದರೆ ಬದುಕು ಪಾವನವಾಗಲಿದೆ ಎಂದು ಆದಿಚುಂಚನಗಿರಿ ಹಾಸನ ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ತಾಲೂಕಿನ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಕಬ್ಬಳಿ ಶ್ರೀ ಬಸವೇಶ್ವರಸ್ವಾಮಿ ಸನ್ನಿಧಿಯಲ್ಲಿ ಧನುರ್ಮಾಸ ಪ್ರಯುಕ್ತ ಬಸವ ಕಳಸ ಪ್ರತಿಷ್ಠಾಪಿಸಿ, ದೇವರ ಅನುಗ್ರಹವಿದ್ದರೆ ಮಾತ್ರ ಬದುಕಿನಲ್ಲಿ ಮುಕ್ತಿ ಪಡೆಯಲು ಸಾಧ್ಯ ಎಂದರು.

ಶ್ರದ್ಧೆ, ಭಕ್ತಿ ಹಾಗೂ ದೃಢ ಸಂಕಲ್ಪದೊಂದಿಗೆ ಬಸವ ಮಾಲೆ ಧರಿಸಿ, ಪೂಜೆ, ಭಜನೆ, ಸ್ಮರಣೆ, ಜಪ-ತಪ ಮಾಡಿದರೆ ಪುಣ್ಯ ಲಭಿಸುವುದರ ಜೊತೆಗೆ ಆತ್ಮ ಪರಿಶುದ್ಧತೆಯೊಂದಿಗೆ ದೈವಾಂಶ ಗುಣ ಬೆಳೆಯಲಿದೆ. ದೇವರ ಪಾದದಲ್ಲಿ ನಿಮಗೆ ಮುಕ್ತಿ ಸಿಗಲಿದೆ ಎಂದು ತಿಳಿಸಿದರು.

ಆಧುನಿಕತೆಯೊಂದಿಗೆ ಶೈಕ್ಷಣಿಕ ವ್ಯವಸ್ಥೆಯು ಬೆಳೆದಂತೆಲ್ಲ ಮಾನವೀಯತೆ ಮೌಲ್ಯ ಕುಸಿಯುತ್ತಿದೆ. ಯುವ ಸಮುದಾಯವು ಹೆತ್ತವರು ಹಾಗೂ ಗುರು ಹಿರಿಯರನ್ನು ಕಡೆಗಣಿಸುತ್ತಿದೆ. ಅನಾಥಾಶ್ರಮ ಹಾಗೂ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿವೆ. ಮೌಲ್ಯಯುತ ಶಿಕ್ಷಣದ ಜೊತೆಗೆ ಸಂಸ್ಕಾರ ಸಿಗದೇ ಸಮಾಜದ ಬದಲಾವಣೆ ಸಾಧ್ಯವಿಲ್ಲ ಎಂದು ಕಿವಿಮಾತು ಹೇಳಿದರು.

ಸನ್ನಿಧಿಯಲ್ಲಿ ಬಸವ ಕಳಸ ಪ್ರತಿಷ್ಠಾಪಿಸುವ ಮೂಲಕ ಧನುರ್ಮಾಸ ವ್ರತಕ್ಕೆ ಚಾಲನೆ ನೀಡಲಾಗಿದ್ದು ಜ. 14ರ ವರೆಗೆ ಪ್ರತಿದಿನ ಪೂಜೆ, ಭಜನೆ ಹಾಗೂ ಅನ್ನದಾಸೋಹ ನಡೆಯಲಿದೆ. ಸಾವಿರಾರು ಮಂದಿ ಭಕ್ತರು ಬಸವ ಮಾಲೆ ಧರಿಸಿ ವ್ರತದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರು ಆಗಮಿಸಿ ಶ್ರೀಕ್ಷೇತ್ರದಲ್ಲಿ ಬಸವ ಮಾಲೆ ಧರಿಸಿ, ಬಸವ ಕಳಶವನ್ನು ಊರಿಗೆ ತೆಗೆದುಕೊಂಡು ಹೋಗಿ ದೇಗುಲಗಳಲ್ಲಿ ಸ್ಥಾಪಿಸಿ ಒಂದು ತಿಂಗಳ ಕಾಲ ವ್ರತ ಕೈಗೊಂಡು ಮಕರ ಸಂಕ್ರಾಂತಿ ಹಬ್ಬದ ಹಿಂದಿನ ದಿನ ಸಂಜೆ ಗ್ರಾಮದೇವತೆಗಳೊಂದಿಗೆ ಬಸವ ಕಳಸ ಹೊತ್ತು ಶ್ರೀಕ್ಷೇತ್ರಕ್ಕೆ ಬಸವ ಮಾಲಾಧಾರಿಗಳು ಆಗಮಿಸಿದ್ದಾರೆ. ರಾತ್ರಿ ಪುಷ್ಕರಣಿಯಲ್ಲಿ ಚುಂಚಶ್ರೀಗಳ ತೆಪ್ಪೋತ್ಸವ ಜರುಗಿದ ನಂತರ ಬಸವ ಮಾಲೆ ವಿಸರ್ಜನೆ ಕಾರ್ಯ ನಡೆಯಲಿದೆ. ನಂತರ ಧಾರ್ಮಿಕ ವೇದಿಕೆಯಲ್ಲಿ ಚುಂಚಶ್ರೀಗಳು ಆಶೀರ್ವಚನ ನೀಡಲಿದ್ದಾರೆ ಎಂದರು.

ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಗುಡಿಗೌಡ ಪ್ರಕಾಶ್, ಬೋರೇಗೌಡ, ಬಸವೇಶ್ವರಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಟಿ.ತಿಮ್ಮೇಗೌಡ ಇತರರಿದ್ದರು.

# ಹಾಸನದಲ್ಲಿ ವಿಜಯ್ ದಿವಸ್ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಾಂಗ್ಲಾದೇಶ ವಿಮೋಚನೆ ವೇಳೆ ಪಾಕಿಸ್ತಾನ ವಿರುದ್ಧ ಹೋರಾಟದಲ್ಲಿ ಮಡಿದ ವೀರ ಯೋಧರ ಸ್ಮರಣೆ ಅಂಗವಾಗಿ ಮಂಗಳವಾರ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಉದ್ಯಾನವನದಲ್ಲಿ ಹುತಾತ್ಮರ ಸ್ಮಾರಕಕ್ಕೆ ಗೌರವ ಸಲ್ಲಿಸಿ ವಿಜಯ್ ದಿವಸ್ ಆಚರಿಸಲಾಯಿತು.

ನಿವೃತ್ತ ಯೋಧರು, ಸಾರ್ವಜನಿಕರು ಸ್ಮಾರಕಕ್ಕೆ ಪುಷ್ಪಾರ್ಪಣೆ ಮಾಡಿ ಎರಡು ನಿಮಿಷ ಮೌನ ಆಚರಿಸುವ ಮೂಲಕ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ವೀರರಿಗೆ ನಮನ ಸಲ್ಲಿಸಿದರು.

ಮೇಜರ್ ವಿ. ಶಂಕರ್ ಮಾತನಾಡಿ, ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಒಬ್ಬ ವ್ಯಕ್ತಿಯ ಪ್ರಯತ್ನ ಸಾಕಾಗುವುದಿಲ್ಲ. ದೇಶ ರಕ್ಷಣೆಯಲ್ಲಿ ಯೋಧರು ಸಲ್ಲಿಸುವ ಕೊಡುಗೆ ಅತ್ಯಮೂಲ್ಯವಾಗಿದೆಯೆಂದರು.

ಹಾಸನದಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಉದ್ಯಾನವನ ನಿರ್ಮಾಣವೂ ತಂಡದ ಶ್ರಮದ ಫಲವಾಗಿದೆ. ದೇಶದ ಅಭಿವೃದ್ಧಿಗೂ ಇಂತಹ ಸಮರ್ಪಿತ ತಂಡಗಳ ಅಗತ್ಯವಿದೆ. ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡುವ ಮನೋಭಾವ ಎಲ್ಲರಲ್ಲೂ ಇರಬೇಕೆಂದರು.



ನಿವೃತ್ತ ಯೋಧರ ಸಂಘದ ಗೌರವಾಧ್ಯಕ್ಷ ಬಿ.ದೊರೆರಾಜು ಮಾತನಾಡಿ, ದೇಶ ರಕ್ಷಣೆಗೆ ಪ್ರಾಣ ತ್ಯಾಗ ಮಾಡಿದ ಯೋಧರು ದೇವರ ಸಮಾನರು. ಬಾಂಗ್ಲಾದೇಶ ಯುದ್ಧ ಸೇರಿ ವಿವಿಧ ಯುದ್ಧಗಳಲ್ಲಿ ಭಾರತೀಯ ಸೇನೆಯ ಮೂರು ವಿಭಾಗಗಳು ಮಹತ್ವದ ಪಾತ್ರ ವಹಿಸಿದೆ. ಬೇರೆ ರಾಷ್ಟ್ರದ ಹಿತಕ್ಕಾಗಿಯೂ ಭಾರತ ಅನೇಕ ಬಾರಿ ಯುದ್ಧ ಮಾಡಿದೆ ಎಂದರು.

ನಿವೃತ್ತ ಯೋಧರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಎಸ್.ಪ್ರದೀಪ್ ಸಾಗರ್, ಶರತ್ ಅಣ್ಣೇಗೌಡ, ಪುನೀತ್, ಡಾ. ವೆಂಕಟೇಶ್, ಡಿ.ಇ.ಸ್ವಾಮಿ, ಹೆಚ್.ಎ.ಲೋಕೇಶ್, ನಾರಾಯಣಸ್ವಾಮಿ, ಶ್ರೀಧರ್, ಕೃಷ್ಣೇಗೌಡ ಇತರರಿದ್ದರು.

# ಅತ್ಯಾಚಾರ ಅಪರಾಧಿಗೆ 20 ವರ್ಷ ಗರಿಷ್ಠ ಜೈಲು ಶಿಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಾಲಕಿಯನ್ನು ಪುಸಲಾಯಿಸಿ ಅತ್ಯಾಚಾರ ಎಸಗಿದ್ದು ಮಾತ್ರವಲ್ಲದೆ ಗರ್ಭಿಣಿ ಮಾಡಿದ್ದ ಅಪರಾಧಿಗೆ 20 ವರ್ಷಗಳ ಕಠಿಣ ಕಾರಾಗೃಹ ಹಾಗು 25 ಸಾವಿರ ರೂ. ದಂಡ ವಿಧಿಸಿ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಲಯ (ಪೋಕ್ಸೋ 1) ಮಂಗಳವಾರ ತೀರ್ಪು ನೀಡಿದೆ. ತಾಲೂಕಿನ ಗೊರೂರು ಠಾಣಾ ವ್ಯಾಪ್ತಿಯ ಗ್ರಾಮವೊಂದರ ಚೇತನ್ (28) ಎಂಬಾತನ ವಿರುದ್ಧ 2022ರ ಅ. 12ರಂದು ದೂರು ದಾಖಲಾಗಿತ್ತು. ಐಪಿಸಿ ಕಲಂ 376(2)(ಎನ್), 376(3) ಹಾಗೂ 506ರ ಮತ್ತು ಪೋಕ್ಸೋ ಕಾಯ್ದೆಯ ಕಲಂ 4 ಹಾಗೂ 6ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಹೆಚ್.ಎಂ.ದೇವರಾಜು ಅವರು, ಸಾಕ್ಷ್ಯಾಧಾರಗಳ ಪರಿಗಣಿಸಿ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಶ್ರೀನಿವಾಸಗೌಡ ವಾದ ಮಂಡಿಸಿದ್ದರು.

# ಹೋರಾಟಗಾರರ ವಿರುದ್ಧದ ಕೇಸ್ ಹಿಂಪಡೆಯಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕಾಡಾನೆ ಜೊತೆಗಿನ ಕಾದಾಟದಲ್ಲಿ ವೀರ ಮರಣವಪ್ಪಿದ್ದ ಅರ್ಜುನ ಆನೆ ಸ್ಮಾರಕಕ್ಕೆ ಆಗ್ರಹಿಸಿದ್ದ ಹೋರಾಟಗಾರರ ಮೇಲೆ ದಾಖಲಾಗಿರುವ ಪ್ರಕರಣ ವಾಪಸ್ ಪಡೆಯಬೇಕು ಎಂದು ಮಲೆನಾಡು ರಕ್ಷಣಾ ಸೇನೆಯ ರಾಜ್ಯಾಧ್ಯಕ್ಷ ಜಾನೆಕೆರೆ ಸಾಗರ್ ಒತ್ತಾಯಿಸಿದ್ದಾರೆ.

ಮಲೆನಾಡು ರಕ್ಷಣಾ ಸೇನೆ ವತಿಯಿಂದ ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಹೋರಾಟಗಾರರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಅರ್ಜುನ ಆನೆಯ ಸ್ಮಾರಕ ಪರ ನ್ಯಾಯ ಕೇಳಲು ಹೋರಾಟ ಮಾಡಿದವರ ಮೇಲೆ ಎರಡು ವರ್ಷದ ನಂತರ ಪ್ರಕರಣ ದಾಖಲಾಗಿದೆ. ರೈತರ ಪರ, ಆನೆ ಪರ ಹೋರಾಟ ಮಾಡಿದರು ಪ್ರಕರಣ ದಾಖಲು ಮಾಡಲಾಗುತ್ತಿದೆ.

ಹೋರಾಟಗಾರರಾದ ಯಡೇಹಳ್ಳಿ ಆರ್. ಮಂಜುನಾಥ್, ಹುರುಡಿ ವಿಕ್ರಂ ಹಾಗೂ ಕಾಫಿ ಬೆಳೆಗಾರರ ಸಂಘಟನೆಯ ಬೆಕ್ಕನಹಳ್ಳಿ ನಾಗರಾಜ್ ಸೇರಿದಂತೆ 19 ಜನರ ಮೇಲೆ ಪ್ರಕರಣ ದಾಖಲಿಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದರು.

ಆನೆ ಸಾವಿನ ಸತ್ಯಾಂಶ ಬಹಿರಂಗಪಡಿಸುವ ಬದಲು ಹೋರಾಟಗಾರರನ್ನು ಗುರಿಯಾಗಿಸಿ ಪ್ರಕರಣ ದಾಖಲಿಸುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತಿದೆ. ಅರ್ಜುನ ಆನೆಯ ಸಾವಿನ ಹಿಂದೆ ಅರಣ್ಯ ಇಲಾಖೆಯ ಬೇಜವಾಬ್ದಾರಿ



ಇರುವ ಸಾಧ್ಯತೆಯನ್ನು ಮರೆಮಾಚಲು ಸರ್ಕಾರ ವಾಮಮಾರ್ಗ ಹಿಡಿದಿದೆ ಎಂದು ದೂರಿದರು.

ಇದೇ ಸರ್ಕಾರ ಈ ಹಿಂದೆ ರೈತರ ಪರವಾಗಿ ಹೋರಾಟ ನಡೆಸಿದ ನಮ್ಮ ಸಂಘದ ಕಾರ್ಯಕರ್ತರ ಮೇಲೂ ಬಲಪ್ರಯೋಗ ಮಾಡಿ ಪ್ರಕರಣ ದಾಖಲಿಸಿ ಹೋರಾಟದ ದಿಕ್ಕು ತಪ್ಪಿಸಲು ಯತ್ನಿಸಿತ್ತು. ಇದು ಸ್ಪಷ್ಟವಾದ ದ್ವೇಷ ರಾಜಕಾರಣಕ್ಕೆ ಉದಾಹರಣೆಯಾಗಿದೆ. ಹೋರಾಟಗಾರರನ್ನು ಹತ್ತಿಕ್ಕುವ ಪ್ರಯತ್ನಗಳು ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ವಿರುದ್ಧವಾಗಿವೆ. ಅರ್ಜುನ ಆನೆಯ ಸಾವಿನ ಕುರಿತಾಗಿ ಸ್ವತಂತ್ರ ಹಾಗೂ ಪಾರದರ್ಶಕ ತನಿಖೆ ನಡೆಸಬೇಕು, ಹೋರಾಟಗಾರರ ಮೇಲಿನ ಎಲ್ಲ ಪ್ರಕರಣಗಳನ್ನು ಹಿಂಪಡೆಯಬೇಕು ಹಾಗೂ ಅರಣ್ಯ ಇಲಾಖೆಯ ಹೊಣೆಗಾರಿಕೆಯನ್ನು ನಿಶ್ಚಿತಪಡಿಸಬೇಕು ಎಂದು ಮಲೆನಾಡು ಸೇನೆ ಸರ್ಕಾರವನ್ನು ಒತ್ತಾಯಿಸುತ್ತದೆ. ನ್ಯಾಯದ ಹೆಸರಿನಲ್ಲಿ ಧ್ವನಿ ಎತ್ತುವವರನ್ನು ದಮನಿಸುವ ಯಾವುದೇ ಕ್ರಮಗಳನ್ನು ಸಂಘ ಖಂಡಿಸುತ್ತದೆ ಎಂದರು.

ಸರ್ಕಾರ ಗಂಭೀರ ಚಿಂತನೆ ನಡೆಸಿ ತಕ್ಷಣವೇ 19 ಜನರ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಹಿಂಪಡೆದು ಹೋರಾಟಗಾರರಿಗೆ ಗೌರವ ಸೂಚಿಸಬೇಕೆಂದು ಮನವಿ ಸಲ್ಲಿಸಲಾಯಿತು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಶಾಂತಿಯುತ ಪ್ರತಿಭಟನೆಗಳನ್ನು ನಡೆಸಲಾಗುವುದು ಎಂದು ಎಚ್ಚರಿಸಿದರು.

ಸಂಘಟನೆಯ ರೈತ ಘಟಕದ ಅಧ್ಯಕ್ಷ ಪ್ರಸನ್ನ ಮಾತನಾಡಿ, ಸರ್ಕಾರದ ಪಾಪದ ಕೊಡ ತುಂಬಿದೆ. ಹೋರಾಟಗಾರರ ಮೇಲೆ ಹಾಕಿರುವ ಪ್ರಕರಣಗಳನ್ನು ಸರ್ಕಾರದ ಮಟ್ಟದಲ್ಲಿ ಹಿಂಪಡೆಯಬೇಕು. ಹೋರಾಟ ನಮ್ಮ ಹಕ್ಕಾಗಿದ್ದು ಪ್ರಕರಣವನ್ನು ಹಿಂಪಡೆಯದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆ ಎಂದರು.

ಸಂಘಟನೆಯ ಮುಖಂಡರಾದ ಮಂಜುದೇವ್, ಪ್ರಸನ್ನ, ಗಿರೀಶ್, ನಾಗೇಂದ್ರ, ಪಟೇಲ್, ರುದ್ರೇಶ್, ವಿನಯ್, ಯೋಗೇಶ್ ಹಾಗೂ ತೇಜಸ್ ಉಪಸ್ಥಿತರಿದ್ದರು.

# ಎನ್.ಆರ್.ವೃತ್ತದಲ್ಲಿ ಹೊಯ್ಸಳರ ಲಾಂಛನ ನಿರ್ಮಾಣಕ್ಕೆ ಆಗ್ರಹ

## ಜಿಲ್ಲೆಗೆ ಹೊಯ್ಸಳರ ಕೊಡುಗೆ ಅಪಾರ | ಡಾ. ಎನ್.ರಮೇಶ್ ಅಭಿಮತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಎನ್.ಆರ್. ವೃತ್ತದಲ್ಲಿ ಹೊಯ್ಸಳರ ಲಾಂಛನ ಅನಾವರಣ ಮಾಡಬೇಕೆಂದು ಹಾಸನಾಂಬೆ ಮಕ್ಕಳು ಸಮಿತಿಯ ಡಾ. ಎನ್.ರಮೇಶ್ ಮಹಾನಗರಪಾಲಿಕೆಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ಸುದೀರ್ಘ ಪತ್ರ ಬರೆದಿರುವ ಅವರು, ಎನ್.ಆರ್.ವೃತ್ತದಲ್ಲಿ ಮೈಸೂರು ಮಹಾರಾಜರಾದ ದಿ. ನರಸಿಂಹರಾಜ ಒಡೆಯರ್ ಅವರ ಪುತ್ಥಳಿ ಪ್ರತಿಷ್ಠಾಪಿಸುವ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆ ಇದ್ದರೆ ತಿಳಿಸಿ ಎಂಬ ಪ್ರಕಟಣೆ ಹೊರಡಿಸಲಾಗಿದೆ. ಹೊಯ್ಸಳರ ಅಸ್ಮಿತೆ ಉಳಿಯಬೇಕೆಂದರೆ ಹೊಯ್ಸಳರ ಲಾಂಛನ ಅನಾವರಣವಾಗಲಿ ಎಂದು ಅವರು ತಿಳಿಸಿದ್ದಾರೆ.

ಹಾಸನ ಎಂದರೆ ಹೊಯ್ಸಳರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಹೊಯ್ಸಳರು ಎಂದರೆ ಸಂಸ್ಕೃತಿ ತ್ಯಾಗ ಬಲಿದಾನ ಪೌರುಷ ಹಾಗೂ ಸಮೃದ್ಧಿಯ ಸಂಕೇತ. ಈ ನಾಡಿನ ಸಂಸ್ಕೃತಿಯ ಪ್ರತೀಕ. ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣ, ಕಸಾಪದ ಹೊಯ್ಸಳ ಹೆಬ್ಬಾಗಿಲು, ಒಂದೆರಡು ಬಿಟ್ಟರೆ ಹೊಯ್ಸಳರ ಹೆಸರೇ ಬಹುಶಃ ನಗರದಿಂದ ಕಣ್ಮರೆಯಾಗಿದೆ. ಹಾಸನದಲ್ಲಿ ಹೊಯ್ಸಳರ ಹೆಸರನ್ನು ಅಜರಾಮರವಾಗಿಸುವ ಯಾವುದೇ ಕಾರ್ಯಗಳು ಕಂಡುಬಂದಿರುವುದಿಲ್ಲ. ಇದು ನಾವು 350 ವರ್ಷಗಳ ಕಾಲ ನಮ್ಮ ಜಿಲ್ಲೆಯಿಂದ ರಾಜ್ಯಭಾರ ಮಾಡಿ ಈ ನಾಡಿನ ಕಲೆ ಸಂಸ್ಕೃತಿಯನ್ನು ಇತಿಹಾಸ ಮತ್ತು ಪರಂಪರೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ಹೊಯ್ಸಳರಿಗೆ ಮಾಡಿದ ಅವಮಾನ ಎಂದರೆ ತಪ್ಪಾಗಲಾರದು.

ಹೊಯ್ಸಳರು ಈ ನಾಡಿಗೆ ನೀಡಿದ ಕೊಡುಗೆಗಳು, ತನ್ಮೂಲಕ ಅವರು ಹಾಕಿಕೊಟ್ಟ ಬುನಾದಿಯಿಂದ ಶ್ರೀಮಂತಗೊಂಡ ನಾಡಿನ ಅನೇಕ ಉದಾಹರಣೆಗಳು ನಮ್ಮ ಕಣ್ಣು ಮುಂದೆ ಇದೆ. ಹೊಯ್ಸಳ ಸಾಮ್ರಾಜ್ಯದ ಕಾಲದಲ್ಲಿ ಕಲೆ ಶಿಲ್ಪಕಲೆ ಪರಾಕಾಷ್ಠೆಯನ್ನು ತಲುಪಿ, ಸಾಂಸ್ಕೃತಿಕವಾಗಿ ನಾಡು ಮತ್ತು ನುಡಿಗಳನ್ನು ಶ್ರೀಮಂತವಾಗಿಸಲು ತಮ್ಮದೇ ಕೊಡುಗೆಗಳನ್ನು ನೀಡಿದರು. ನೂರಾರು



ಕೆರೆಕಟ್ಟೆಗಳನ್ನು, ಕಲ್ಯಾಣಿಗಳನ್ನು, ಸಾವಿರಾರು ದೇವಾಲಯಗಳನ್ನು ನಿರ್ಮಿಸಿ ಈ ನೆಲದ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ತಮ್ಮದೇ ಕೊಡುಗೆಗಳನ್ನು ನೀಡಿದರು. ಅದರ ಪ್ರತಿಫಲವೇ ಹೊಯ್ಸಳರು ನಿರ್ಮಿಸಿದ ಬೇಲೂರು ಹಳೇಬೀಡು ಮತ್ತು ಸೋಮನಾಥಪುರದ ದೇವಾಲಯಗಳು ಇಂದು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿರುವುದು. ತನ್ಮೂಲಕ ಲಕ್ಷಾಂತರ ಮಂದಿ ಭಕ್ತರನ್ನು ಕಲಾಪ್ರಿಯರನ್ನು ಈ ನಾಡಿಗೆ ಕೈಬಿಸಿ ಆಕರ್ಷಿಸುತ್ತಿದೆ. ಆದರೂ ಸಹ ಹೊಯ್ಸಳರ ಬಗ್ಗೆ ಅವರು ನೀಡಿದ ಕೊಡುಗೆಗಳ ಸ್ಮರಿಸುವಂತಹ ಪ್ರಾಮಾಣಿಕ ಪ್ರಯತ್ನವಾಗಲಿ (ತೀರ ಇತ್ತೀಚೆಗೆ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿದ ಮೇಲಾದರು) ಸಂತೋಷ ಸಂಭ್ರಮಾಚರಣೆಗಳಾಗಲಿ ಕಂಡು ಬರುತ್ತಿಲ್ಲ. ನಾವು ಹಾಸನದವರು ಹೆಮ್ಮೆ ಪಟ್ಟುಕೊಳ್ಳುವಂತಹ ವಿಷಯ, ಆದರೆ ಅದೇಕೋ ತೀರ ನಿರ್ಲಿಪ್ತರಾದವರಂತೆ ಹೊರನೋಟಕ್ಕೆ ಕಂಡು ಬರುವುದಂತೂ ಸತ್ಯ.

ಕೆಲಕಾಲದ ಹಿಂದೆ ಇದೆ ಎನ್.ಆರ್. ವೃತ್ತದಲ್ಲಿ ಹೊಯ್ಸಳರ ಲಾಂಛನವನ್ನು ಸ್ಥಾಪಿಸಬೇಕೆಂದು ಸಂಬಂಧಪಟ್ಟ ರಾಜಕಾರಣಿಯ ಬಳಿ, ನಗರಸಭೆ ಬಳಿ ವಿಚಾರವನ್ನು ಪ್ರಸ್ತಾಪಿಸಲಾಗಿದ್ದು ಫ್ಲೈ ಓವರ್ ಕಾರ್ಯ ಮುಗಿದ ನಂತರ ಪರಿಶೀಲಿಸುವುದಾಗಿ ಭರವಸೆಯನ್ನು ಕೂಡ ನೀಡಿದ್ದರು. ಅದು ಕೇವಲ ಭರವಸೆ ಯಾಗಿಯೇ ಉಳಿಯಿತು.

### ಹಾಸನ ಎಂದರೆ ಹೊಯ್ಸಳರ ಅಸ್ಮಿತೆ

ಹಾಸನದ ಹೆಸರು ಮೊದಲು ಬರೆಸಿರುವುದು ಹೊಯ್ಸಳರು, ನಗರದ ಅಧಿದೇವತೆ ಶ್ರೀ ಹಾಸನಾಂಬೆ ದೇವಿ ದೇವಾಲಯ ನೀಡಿರುವುದು ಹೊಯ್ಸಳರು, ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿ ವಿಶ್ವದಾದ್ಯಂತ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿರುವ ಬೇಲೂರು ಹಳೇಬೀಡು ಸೊಮನಾಥಪುರ ದೇವಾಲಯಗಳನ್ನು ನೀಡಿರುವುದು ಹೊಯ್ಸಳರು, ನಾಡಿನೆಲ್ಲೆಡೆ ಗ್ರಾಮ ಗ್ರಾಮಗಳಲ್ಲಿ ಕೆರೆಕಟ್ಟೆಗಳನ್ನು, ದೇವಾಲಯಗಳನ್ನು ನಿರ್ಮಿಸಿದವರು ಹೊಯ್ಸಳರು. ಹೊಯ್ಸಳರು ಎಂದರೆ ಹಾಸನದ ಅಸ್ಮಿತೆ. ನಾಡಿನ ಅಸ್ಮಿತೆ ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಹೊಯ್ಸಳರ ಅಸ್ಮಿತೆ, ಎಂದಿಗೂ ಎಂದೆಂದಿಗೂ ಜೀವಂತವಾಗಿ ಉಳಿಯಲಿ.

ಹಾಸನ ಜಿಲ್ಲಾ ಕೇಂದ್ರವಾದ ಹಾಸನದಲ್ಲಿ ಕಣ್ಮನ ಸೆಳೆಯುವ, ಅಭಿಮಾನದ ಸಂಕೇತವಾದ ಹೊಯ್ಸಳ ಲಾಂಛನವು ಇರುವುದಿಲ್ಲ. ನಗರದ ಹೃದಯ ಭಾಗದಲ್ಲಿರುವ ಎನ್.ಆರ್. ವೃತ್ತದಲ್ಲಿ ಬೃಹತ್ ಹೊಯ್ಸಳರ ಲಾಂಛನ, (ಸಳ ಹುಲಿಯನ್ನು ಕೊಲ್ಲುತ್ತಿರುವ ಲಾಂಛನ) ಸ್ಥಾಪನೆಯಾಗಲಿ. ಹಾಸನಕ್ಕೆ ಆಗಮಿಸುವ ಪ್ರವಾಸಿಗರಿಗೆ ಮತ್ತು ಜನತೆಗೆ ಹೊಯ್ಸಳರ ಬಗ್ಗೆ ಹೆಮ್ಮೆ ಮೂಡುವುದಲ್ಲದೆ, ನಗರ ಸೌಂದರ್ಯಕ್ಕೆ ಮೆರಗು ನೀಡಿ ಮುಂದಿನ ಪೀಳಿಗೆಗೆ ಹೊಯ್ಸಳರ ಬಗ್ಗೆ ಅರಿವುಂಟಾಗುವುದು. ನಾಡನ್ನು ಆಳಿದವರ ಬಗ್ಗೆ ಅಭಿಮಾನ ಹೆಚ್ಚುವುದು. ಪ್ರತಿವರ್ಷ ನಡೆಯುವ ಹಾಸನಾಂಬ ದೇವಿ ಜಾತ್ರೆಯ ಸಂದರ್ಭದಲ್ಲಿ ಲಕ್ಷಾಂತರ ಮಂದಿ ನೆರೆ ರಾಜ್ಯಗಳಿಂದಲೂ ಸಹ ಹಾಸನಕ್ಕೆ ಭೇಟಿ ನೀಡುತ್ತಾರೆ. ಪ್ರಮುಖ ವೃತ್ತವಾದ ಎನ್.ಆರ್. ಸರ್ಕಲ್‌ನಲ್ಲಿ ಹೊಯ್ಸಳ ಲಾಂಛನದ ಸಂದೇಶವು ಜಿಲ್ಲೆ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಲ್ಲಿ ಹರಡುವುದರಲ್ಲಿ ಯಾವ ಸಂದೇಹವು ಇರುವುದಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

# ಶಾಮನೂರು ಶಿವಶಂಕರಪ್ಪ ಅಗಲಿಕೆಗೆ ಸಂತಾಪ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿಧನಕ್ಕೆ ತಾಲೂಕು ವೀರಶೈವ ಲಿಂಗಾಯತ ಮಹಾಸಭಾದಿಂದ ನಗರದ ಪಿಪಿ ವೃತ್ತದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹಿರಿಯ ಮುಖಂಡ ಗಂಜಿಗೆರೆ ಚಂದ್ರಶೇಖರ್ ಮಾತನಾಡಿ, ಶಾಮನೂರು ಶಿವಶಂಕರಪ್ಪ ಸಮಾಜಕ್ಕೆ ಆಸ್ತಿಯಾಗಿದ್ದರು. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ ಹೀಗೆ ಹಲವು ಕ್ಷೇತ್ರಗಳಲ್ಲಿ ಅವರು ಸಲ್ಲಿಸಿರುವ ಸೇವೆ ಅಪಾರವಾಗಿದೆ ಎಂದರು.

ಜೆಡಿಎಸ್ ಮುಖಂಡ ವಿವೇಕ್ ಮಾತನಾಡಿ, ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೆ ಸಾವು ಎಂಬುದು ಕಟ್ಟಿಟ್ಟ ಬುತ್ತಿ. ಕೆಲವರು ತಮ್ಮ ಜೀವಿತಾವಧಿಯಲ್ಲಿ ಸಮಾಜಕ್ಕೆ ನೀಡುವ ಕೊಡುಗೆಯಿಂದ ಸತ್ತ ಮೇಲೂ ಜೀವಂತ ಇರುತ್ತಾರೆ. ಅಂತಹ ಮೇರು ವ್ಯಕ್ತಿತ್ವ ಶಾಮನೂರು ಶಿವಶಂಕಪ್ಪನವರಾಗಿತ್ತು. ಅವರು ದೈಹಿಕವಾಗಿ ನಮ್ಮೊಂದಿಗೆ ಇರದೆ ಇರುವುದು ಸಮಾಜಕ್ಕೆ ತುಂಬಲಾರದ ನಷ್ಟ ಎಂದು ಸಂತಾಪ ಸೂಚಿಸಿದರು. ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಉಪಾಧ್ಯಕ್ಷ ಶಿವಣ್ಣ ಮಾತನಾಡಿ, ಶಾಮನೂರು ಶಿವಶಂಕರಪ್ಪ ಅವರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಸಮಾಜಕ್ಕೆ ಶಕ್ತಿಯಾಗಿದ್ದರು. ಜಾತಿ, ಮತ, ಪಂಥ ಮೀರಿದ್ದ ಅವರ ಜೀವನ ನಮ್ಮೆಲ್ಲರಿಗೂ ಆದರ್ಶವಾಗಿದೆ ಎಂದು ಹೇಳಿದರು.

ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಹಿರಿಯೂರು ರೇವಣ್ಣ, ಮುಖಂಡರಾದ ಜಿವಿಟಿ ಬಸವರಾಜ್, ಜಯರಾಂ, ವೆಂಕಟಮುನಿ, ಸುಬ್ರಹ್ಮಣ್ಯ ಬಾಬು, ಹೇಮಂತ್ ಕುಮಾರ್, ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷ ಎನ್.ಜಿ. ಮಧು ಇತರರಿದ್ದರು.

# ವಿಕಲಚೇತನರಿಗೆ ಸರ್ಕಾರದ ಸವಲತ್ತು ತಲುಪಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿವಿಧ ಇಲಾಖೆಗಳ ಮೂಲಕ ನೀಡುವ ಸರ್ಕಾರದ ಸವಲತ್ತುಗಳನ್ನು ನೀಡುವಾಗ ವಿಕಲಚೇತನರಿಗೆ ಮೊದಲ ಆದ್ಯತೆ ನೀಡುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿಕಲಚೇತನರ ಕುಂದು ಕೊರತೆ ಅಹವಾಲು ಸ್ವೀಕಾರ ಸಭೆಯಲ್ಲಿ ಮಾತನಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ವಿಕಲಚೇತನರಿಗೆ ಶೇ. 5 ರಷ್ಟು ಅನುದಾನ ಮೀಸಲಿಟ್ಟು ಅವರ ಬೆಳವಣಿಗೆಗೆ ಪೂರಕವಾಗಿ ಸದ್ಬಳಕೆ ಮಾಡುವಂತೆ ತಿಳಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ, ಕಲಾ ಭವನ, ಶಾಲೆ-ಕಾಲೇಜು, ಆಸ್ಪತ್ರೆಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ವಿಕಲಚೇತನರಿಗೆ ನೆರವಾಗುವಂತೆ ರ್ಯಾಂಪ್ ಇರಬೇಕು ಎಂದರು.



ಎಲ್ಲಾ ಸರ್ಕಾರಿ ಆಸ್ಪತ್ರೆಗಳ ನಾಮಫಲಕದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಅವರ ಹೆಸರು ಮೊಬೈಲ್ ನಂಬರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಅಳವಡಿಸಬೇಕು. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ವಿಕಲಚೇತನರ ಗ್ರಾಮ ಸಭೆ ನಡೆಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಮಾಜದಲ್ಲಿ ವಿಕಲಚೇತನರನ್ನು ಕಡೆಗಣಿಸದೆ ಸಮಾನತೆಯಿಂದ ನೋಡಬೇಕು. ಅವರ ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಲು ಅಗತ್ಯವಿರುವ ಸಾಧನ ಸಲಕರಣೆಗಳು, ಶಿಕ್ಷಣ, ಆರೋಗ್ಯ ಸೌಲಭ್ಯಗಳನ್ನು ನಂತರ ಯಾರ ಮೇಲೂ ಅವಲಂಬಿತರಾಗದಂತೆ ಸ್ವಯಂ ಉದ್ಯೋಗವನ್ನು ಪಡೆದುಕೊಳ್ಳಲು ಕೌಶಲ್ಯ ತರಬೇತಿಗಳನ್ನು ನೀಡುವ ಮೂಲಕ ಉದ್ಯೋಗದಲ್ಲಿ ತೊಡಗಿಕೊಳ್ಳಲು ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ವಿಶೇಷವಾಗಿ ಜಿಲ್ಲಾ ಮಟ್ಟದಲ್ಲಿ ವಿಶೇಷ ಚೇತರಿಗಾಗಿಯೇ ಉದ್ಯೋಗ ಮೇಳ ಆಯೋಜಿಸಲು ಕ್ರಮ ಕೈಗೊಳ್ಳಬೇಕು. ವಿಕಲಚೇತನರ ತಂದೆ ಅಥವಾ ತಾಯಿ ಸರ್ಕಾರಿ ನೌಕರಿಯಲ್ಲಿದ್ದು, ನಿವೃತ್ತ ಹೊಂದಿದ್ದಲ್ಲಿ ಅವರ ಮಕ್ಕಳಿಗೆ ಪಿಂಚಣಿ ನೀಡುವ ಸೌಲಭ್ಯವಿರುತ್ತದೆ. ಇದರ ಕುರಿತು ಹೆಚ್ಚಿನ ಪ್ರಚಾರ ನೀಡಿ ಎಂದು ತಿಳಿಸಿದರು.

ಸ್ಥಳೀಯ ಸಂಸ್ಥೆ ಮಟ್ಟದಲ್ಲಿ ವಿಕಲಚೇತರಿಗೆ ಆದ್ಯತೆ ಮೇರೆಗೆ ವಸತಿ ಯೋಜನೆಯಡಿ ಸೌಲಭ್ಯ ಕಲ್ಪಿಸಲು ಸೂಚಿಸಿದರಲ್ಲದೆ, ಉಚಿತ ಕಾನೂನು ನೆರವು ಒದಗಿಸಲು ಕ್ರಮವಹಿಸಬೇಕು.

ಪ್ರತಿ ತಿಂಗಳು ವಿಕಲಚೇತರ ಮನೆ ಬಾಗಿಲಿಗೆ ಪಡಿತರ ತಲುಪಿಸಲು ಕ್ರಮಕೈಗೊಳ್ಳುವಂತೆ ತಿಳಿಸಿದರಲ್ಲದೆ, ವಿಕಲಚೇತನರು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅಗತ್ಯ ಕ್ರೀಡಾ ಪರಿಕರಗಳನ್ನು ಕಡ್ಡಾಯವಾಗಿ ಒದಗಿಸುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಅನಿಲ್‌ಕುಮಾರ್, ಹಿಮ್ಸ್ ಮಾನಸಿಕ ವಿಭಾಗದ ಮುಖ್ಯಸ್ಥ ಡಾ. ಸಂತೋಷ್, ವಕೀಲ ಚಂದ್ರಶೇಖರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ ಇತರರಿದ್ದರು.

# ಹಾಸನದ ಬಸ್ ತಂಗುದಾಣಗಳೆಲ್ಲ ಬೈಕ್ ಪಾರ್ಕಿಂಗ್ ಜಾಗಗಳಾಗಿ ಮಾರ್ಪಾಡು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರ ಸಾರಿಗೆ ಬಸ್‌ಗಳಿಗಾಗಿ ರಸ್ತೆ ಬದಿ ನಿಲ್ಲುವ ಪ್ರಯಾಣಿಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಿರ್ಮಿಸಿರುವ ಬಸ್ ತಂಗುದಾಣಗಳು ಬೈಕ್ ಪಾರ್ಕಿಂಗ್, ಪಡ್ಡೆ ಹುಡುಗರ ಸಿಗರೇಟ್ ಸೇದುವ ತಾಣಗಳಾಗಿ ಮಾರ್ಪಟ್ಟಿದ್ದು ಗಮನ ಹರಿಸಬೇಕಿದ್ದ ಮಹಾನಗರ ಪಾಲಿಕೆ ಹಾಗೂ ಪೊಲೀಸರು ಜಾಣ ಕುರುಡುತನ ಪ್ರದರ್ಶಿಸುತ್ತಿದ್ದಾರೆ.

ನಗರದ ಪ್ರಮುಖ ರಸ್ತೆಗಳ ಬಸ್ ತಂಗುದಾಣಗಳಲ್ಲಿ ಕ್ಷೇತ್ರ ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ, ವಿಧಾನ ಪರಿಷತ್ ಸದಸ್ಯರ ಅನುದಾನ ಹಾಗೂ ಸ್ಥಳೀಯ ಸಂಸ್ಥೆಯ ವಿವಿಧ ಯೋಜನೆಯಡಿ ನಿರ್ಮಿಸಲಾಗಿದೆ. ಹಾಸನ ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಇತ್ತೀಚೆಗೆ ಮೇಲ್ದರ್ಜೆಗೇರಿದ್ದು ಅವಶ್ಯಕತೆಗೆ ಅನುಗುಣವಾಗಿ ಬಸ್ ತಂಗುದಾಣಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆ ಇದೆ. ಬಹುತೇಕ ತಂಗುದಾಣಗಳು ದುರುಪಯೋಗವಾಗುತ್ತಿವೆ ಎಂಬುದು ಅಷ್ಟೇ ಸತ್ಯ.

ನಗರದ ಬಿ.ಕಾಟಿಹಳ್ಳಿಯಲ್ಲಿ ನಿರ್ಮಿಸಿರುವ ಬಸ್ ತಂಗುದಾಣ ಬೈಕ್




ಪಾರ್ಕಿಂಗ್ ಸ್ಥಳವಾಗಿ ಮಾರ್ಪಟ್ಟಿದೆ. ಎಸ್.ಎಂ.ಕೃಷ್ಣ ನಗರ, ಕಾಟಿಹಳ್ಳಿ ಜನರು ನಗರಕ್ಕೆ ಬರಲು ಅಥವಾ ದುದ್ದ, ಅರಸೀಕೆರೆ ಕಡೆಗೆ ಹೋಗಲು ಬಸ್‌ಗಾಗಿ ಕಾಯುತ್ತಾರೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಕೆಲಸಕ್ಕೆ ಹೋಗುವವರು ಬಸ್‌ಗಾಗಿ ಗಂಟೆ ಗಟ್ಟಲೇ ರಸ್ತೆಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಇದೆ. ಆದರೆ ಬಸ್ ತಂಗುದಾಣಗಳಲ್ಲಿ ಜಾಗವಿಲ್ಲದೆ ರಸ್ತೆಯಲ್ಲಿ ನಿಲ್ಲುತ್ತಾರೆ.

ಬೆಳಿಗ್ಗೆಯಾದರೆ ಸಾಕು ಬಡಾವಣೆಯ ಯುವಕರು ತಮ್ಮ ಬೈಕ್‌ಗಳನ್ನು ಅಲ್ಲಿ ನಿಲ್ಲಿಸಿ ಸಂಜೆ ವರೆಗೆ ವಾಪಾಸ್ ಬರುವುದಿಲ್ಲ. ಇನ್ನು ಪ್ರಜ್ಞಾವಂತರೆನಿಸಿಕೊಂಡ ಕೆಲ ಉದ್ಯೋಗಿಗಳು ಸಹ ಅದನ್ನೇ ಪಾರ್ಕಿಂಗ್ ಜಾಗವನ್ನಾಗಿಸಿಕೊಂಡಿದ್ದಾರೆ. ಈ ಬಗ್ಗೆ ಸಾರ್ವಜನಿಕರು ಪ್ರಶ್ನಿಸಿದರೂ ಬೈಕ್‌ಗಳ ಹಾವಳಿಗೆ ಬ್ರೇಕ್ ಬೀಳದಾಗಿದೆ.

ಇನ್ನು ಎಂ.ಜಿ. ರಸ್ತೆಯಲ್ಲಿರುವ ಬಸ್ ತಂಗುದಾಣಗಳೆಲ್ಲಾ ಪಡ್ಡೆ ಹುಡುಗರ ಮೋಜು ಮಸ್ತಿನ ಅಡ್ಡೆಗಳಾಗಿವೆ. ಬೃಹದಾಕಾರದ ಮರದ ನೆರಳು, ಪಕ್ಕದಲ್ಲೇ ಟೀ ಕ್ಯಾಂಟೀನ್ ಇರುವುದರಿಂದ ಬೆಳಿಗ್ಗೆಯಿಂದ ರಾತ್ರಿ ವರೆಗೆ ಯುವಕರು ಅಲ್ಲೇ ಜಮಾಯಿಸಿರುತ್ತಾರೆ. ಅಲ್ಲಿ ಸಾರಿಗೆ ಬಸ್ ಚಾಲಕರು ನಿಲ್ಲಿಸುವುದಿಲ್ಲ. ಪ್ರಯಾಣಿಕರು ಅಲ್ಲಿಂದ ಸ್ವಲ್ಪ ದೂರ ನಿಲ್ಲುವುದರಿಂದ ಅದು ಹೆಸರಿಗಷ್ಟೇ ಬಸ್ ತಂಗುದಾಣವಾಗಿದೆ. ವಾರದಲ್ಲಿ ಎರಡ್ಮೂರು ದಿನ ಟ್ರಾಫಿಕ್ ಪೊಲೀಸರು ಅಲ್ಲಿಯೇ ವಾಹನಗಳ ತಪಾಸಣೆ ಮಾಡುತ್ತಾರೆಯಾದರೂ ಆ ಕಡೆಗೆ ಗಮನ ಹರಿಸುತ್ತಿಲ್ಲವೆಂಬ ಆರೋಪಗಳು ಕೇಳಿಬಂದಿವೆ.

ಅನೇಕ ಬಸ್ ತಂಗುದಾಣಗಳು ಅನೈರ್ಮಲ್ಯದಿಂದ ಕೂಡಿವೆ. ಕೆಲವೆಡೆ ಆಸನಗಳು ಮುರಿದು ಬಿದ್ದರೆ ಹಲವೆಡೆ ಅವುಗಳು ಮಾಯವಾಗಿವೆ. ಕಸದ ರಾಶಿ, ಬೀದಿ ನಾಯಿಗಳ ಆವಾಸ ತಾಣವಾಗಿರುವುದರಿಂದ ಜನರು ಅಲ್ಲಿ ನಿಲ್ಲಲು ಹಿಂದೇಟು ಹಾಕುತ್ತಾರೆ. ಮುಖ್ಯ ರಸ್ತೆಯಲ್ಲಿ ಪೌರ ಕಾರ್ಮಿಕರು ಕಸ ಗುಡಿಸುತ್ತಾರಾದರೂ ಇತ್ತ ಕಡೆಗೆ ಕಣ್ಣು ಹಾಯಿಸುವುದಿಲ್ಲ. ಚರಂಡಿ ಪಕ್ಕದಲ್ಲೇ ತಂಗುದಾಣಗಳು ಇರುವುದರಿಂದ ದುರ್ನಾತವೂ ಹೇಳತೀರದಾಗಿದೆ.

ಚಿಂದಿ ಆಯುವರು, ನಿರ್ಗತಿಕರು, ಮದ್ಯ ವ್ಯಸನಿಗಳು ಇಲ್ಲಿಯೇ ರಾತ್ರಿ ವಾಸ್ತವ್ಯ ಮಾಡುತ್ತಾರೆ. ಕೂಲಿ ಕೆಲಸ ಅರಸಿ ಬರುವ ಹೊರ ರಾಜ್ಯ ಹಾಗೂ ಜಿಲ್ಲೆಯ ಜನರು ಇಲ್ಲಿಯೇ ಬಿಡಾರ ಹೂಡುತ್ತಾರೆ. ರೈಲ್ವೆ ನಿಲ್ದಾಣ ಸಮೀಪದ ಬಸ್ ತಂಗುದಾಣಗಳ ಪರಿಸ್ಥಿತಿಯಂತು ಶೋಚನೀಯವಾಗಿದೆ. ಇತ್ತೀಚೆಗೆ ವ್ಯಕ್ತಿಯೊಬ್ಬನ ಮೇಲೆ ಮಾರಣಾಂತಿಕ ಹಲ್ಲೆ ಸಹ ನಡೆದಿದೆ. ರಾತ್ರಿ ಗಸ್ತು ತಿರುಗುವ ಪೊಲೀಸರು ಸಮಾಜ ಬಾಹಿರ ಕೃತ್ಯಗಳಿಗೆ ಕಡಿವಾಣ ಹಾಕಬೇಕೆಂಬ ಆಗ್ರಹ ಕೇಳಿಬಂದಿದೆ.

# ಕಾರು ಲಾಕ್ ಮಾಡದ ತಪ್ಪಿಗೆ ಚಿನ್ನಾಭರಣ ಮಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಕಾರಿನ ಬಾಗಿಲು ಲಾಕ್ ಮಾಡದೆ ಊಟಕ್ಕೆಂದು ತೆರಳಿದ್ದನ್ನೇ ಕಾದು ಕುಳಿತಿದ್ದ ಕಿಡಿಗೇಡಿಗಳು 4.70 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿದ್ದಾರೆ.

ತಾಲ್ಲೂಕಿನ ಎಂ.ಕೆ.ಹೊಸೂರು ಗ್ರಾಮದಲ್ಲಿ ಘಟನೆ ನಡೆದಿದ್ದು ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿರೀಸಾವೆ ಹೋಬಳಿ ಎಂ.ಕೆ.ಹೊಸೂರು ಗ್ರಾಮದ, ಪ್ರಸ್ತುತ ಬೆಂಗಳೂರಿನಲ್ಲಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿರುವ ಮೂರ್ತಿ ಎಂಬುವವರಿಗೆ ಸೇರಿದ ಚಿನ್ನಾಭರಣ ಕಳುವಾಗಿದೆ.

ಸಂಬಂಧಿಕರ ಮದುವೆ ನಿಮಿತ್ತ ಕುಟುಂಬ ಸಮೇತ ಊರಿಗೆ ಬಂದಿದ್ದ ಅವರು ರಾತ್ರಿ 8.30ರ ಸಮಯದಲ್ಲಿ ಸಂಬಂಧಿ ಬೋರೇಗೌಡ ಅವರ ಮನೆಗೆ ಊಟಕ್ಕೆ ತೆರಳಿದ್ದರು. ಕಾರಿನ ಬಾಗಿಲು ಲಾಕ್ ಮಾಡುವುದನ್ನು ಮರೆತಿದ್ದ ಅವರು ವಾಪಾಸ್ ಬಂದು ಬೆಳ್ಳೂರು ಕ್ರಾಸ್‌ಗೆ ಬಂದು ಪರಿಶೀಲಿಸಿದಾಗ ಚಿನ್ನಾಭರಣ ಇಲ್ಲದಿರುವುದು ಗೊತ್ತಾಗಿದೆ.

ಮೂರ್ತಿ ಅವರ ಪತ್ನಿಗೆ ಸೇರಿದ 10 ಗ್ರಾಂ ತೂಕದ ಒಂದು ಜೊತೆ ಚಿನ್ನದ ಜುಮುಕಿ, 20 ಗ್ರಾಂ ತೂಕದ ಒಂದು ಜೊತೆ ಚಿನ್ನದ ಬಳೆ, 30 ಗ್ರಾಂ ತೂಕದ ಚಿನ್ನದ ಗುಂಡಿನ ಸರ, 10 ಗ್ರಾಂನ ಒಂದು ಚಿನ್ನದ ನೆಕ್ಲೇಸ್, 8 ಗ್ರಾಂನ ಒಂದು ಮುತ್ತಿನ ಸರ, ಒಂದು ಟೈಟಾನ್ ವಾಚ್ ಕಳುವಾಗಿದೆ.

# ಚಿಕಿತ್ಸೆ ಫಲಿಸದೆ ವ್ಯಕ್ತಿ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾರು ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದ ಬೈಕ್ ಸವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಅನುಗವಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಜೇಗೌಡ ಮೃತರು. ಡಿ. 6ರಂದು ಜಮೀನು ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ಬರುತ್ತಿದ್ದಾಗ ದುದ್ದ ಕಡೆಯಿಂದ ವೇಗವಾಗಿ ಬಂದ ಕಾರು ಚಾಲಕ ಡಿಕ್ಕಿ ಮಾಡಿದ್ದಾನೆ. ಗಾಯಾಳುವನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಶನಿವಾರ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೇರು ಮಟ್ಟದಿಂದ ಪಕ್ಷ ಸಂಘಟನೆ ಆದ್ಯತೆಯಾಗಲಿ

## ಎಸಿ ಕೊಠಡಿಯಲ್ಲಿ ಕೂರುವವರಿಂದ ಗೆಲುವು ಅಸಾಧ್ಯ | ಸೂಕ್ತ ಅಭ್ಯರ್ಥಿಗಳ ಹುಡುಕಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಬೆಳಗೋಡು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದ್ದು ಮುಂಬರುವ ಸ್ಥಳೀಯ ಸಂಸ್ಥೆ ಹಾಗೂ ವಿಧಾನಸಭೆ ಚುನಾವಣೆ ದೃಷ್ಟಿಯಿಂದ ಪಕ್ಷ ಸಂಘಟನೆಗೆ ಆದ್ಯತೆ ನೀಡಬೇಕಿದೆ ಎಂದು ಕೆಪಿಸಿಸಿ ಸದಸ್ಯ ಸಲೀಂ ಕೊಲ್ಲಹಳ್ಳಿ ಹೇಳಿದರು.

ತಾಲೂಕಿನ ವಡೂರು ಗ್ರಾಮದ ಹೋಂಸ್ಟೇಯಲ್ಲಿ ನಡೆದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿ, ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದರೂ ಸೋತರೂ ಬೆಳಗೋಡು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ಗೆ ಅಧಿಕ ಬೆಂಬಲ ನೀಡಲಾಗಿದೆ. ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಬೆಳಗೋಡು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಪಕ್ಷವನ್ನು ಇನ್ನಷ್ಟು ಬಲಪಡಿಸಿ, ಸ್ಪರ್ಧಿಸುವ ಕಾಂಗ್ರೆಸ್ ಪಕ್ಷದ ಎಲ್ಲಾ ಅಭ್ಯರ್ಥಿಗಳನ್ನು ಗೆಲ್ಲಿಸುವ ಉದ್ದೇಶದಿಂದಲೇ ಈ ಸಭೆ ಕರೆಯಲಾಗಿದೆ ಎಂದು ಹೇಳಿದರು.

ಪಕ್ಷ ನನಗೆ ಕೆಪಿಸಿಸಿ ಸದಸ್ಯತ್ವ ನೀಡಿದೆ. ಆ ನಿಟ್ಟಿನಲ್ಲಿ ತಳಮಟ್ಟದಿಂದ ಪಕ್ಷವನ್ನು ಬಲಪಡಿಸಲು ಇದು ಮೊದಲ ಸಭೆಯಾಗಿದೆ. ಮುಂದಿನ ದಿನಗಳಲ್ಲಿ ಬೆಳಗೋಡು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಂಟು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಇಂತಹ ಸಭೆಗಳನ್ನು ನಡೆಸಲಾಗುವುದು. ಕಾರ್ಯಕರ್ತರ ಅಭಿಪ್ರಾಯಗಳನ್ನು ಪಕ್ಷದ ಮುಖಂಡರಿಗೆ ತಲುಪಿಸಿ, ಯಾರು ನಾಯಕತ್ವ ವಹಿಸಬೇಕೆಂದು ಕಾರ್ಯಕರ್ತರು ತೀರ್ಮಾನಿಸುತ್ತಾರೋ ಅವರ ಹೆಸರನ್ನು ಶಿಫಾರಸು ಮಾಡಲಾಗುವುದು. ಐಷಾರಾಮಿ ಬಂಗಲೆಯಲ್ಲಿ ಕುಳಿತು ಟಿಕೆಟ್ ಹಂಚುವ ರಾಜಕಾರಣಕ್ಕೆ ನಾವು ಮುಂದಾಗುವುದಿಲ್ಲ ಎಂದು ಹೇಳಿದರು.

ಪಕ್ಷ ಸಂಘಟನೆಯೊಂದೇ ಉದ್ದೇಶ: ಕೆಪಿಸಿಸಿ ಸದಸ್ಯ ಯಡೇಹಳ್ಳಿ ಆರ್. ಮಂಜುನಾಥ್ ಮಾತನಾಡಿ, ಯಸಳೂರು ಹೋಬಳಿಯಲ್ಲಿ ನಡೆದ ಕಾಡಾನೆ ಗಲಾಟೆಯಲ್ಲಿ ಸಾಕಾನೆ ಅರ್ಜುನನ ಸಾವಿಗೆ ಅಧಿಕಾರಿಗಳ ನಿರ್ಲಕ್ಷ್ಯವೇ ನೇರ ಕಾರಣ. ಅರ್ಜುನನ ಸಾವಿಗೆ ಕಾರಣರಾದ ಅಧಿಕಾರಿಗಳನ್ನು ವಜಾಗೊಳಿಸಿ ತನಿಖೆ ನಡೆಸುವಂತೆ ಒತ್ತಾಯಿಸಿ ನಾನು ಹೋರಾಟ ನಡೆಸಿದ್ದೇನೆ. ಆಗ ಯಾವುದೇ ಪ್ರಕರಣ ದಾಖಲಿಸದ ಪೊಲೀಸರು, ಎರಡು ವರ್ಷಗಳ ನಂತರ ಸ್ಥಳದಲ್ಲೇ ಇಲ್ಲದ ಹೋರಾಟಗಾರರ ವಿರುದ್ಧ ಪ್ರಕರಣ ದಾಖಲಿಸಿರುವುದು ನೋವು ತಂದಿದೆ. ಈ ಅನ್ಯಾಯದ ವಿರುದ್ಧವೇ ನಾನು ಕೆಪಿಸಿಸಿ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದೆ. ಆದರೆ ಬೆಳಗೋಡು ಹೋಬಳಿಯ ಮುಖಂಡರು ಹಾಗೂ ಕಾರ್ಯಕರ್ತರು ನನ್ನ ನಿವಾಸಕ್ಕೆ ಬಂದು ಮನವೊಲಿಸಿ, ಪಕ್ಷದ ನಾಯಕರೊಂದಿಗೆ ಮಾತನಾಡಿ ನ್ಯಾಯ ಒದಗಿಸುವ ಭರವಸೆ ನೀಡಿದರು. ಇದರ ಹಿನ್ನೆಲೆ ಪಕ್ಷ ಸಂಘಟನೆಯ ದೃಷ್ಟಿಯಿಂದ ಬೆಳಗೋಡು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಸಭೆ ನಡೆಸಲಾಗಿದೆ. ಇದು ಯಾರ ವಿರುದ್ಧವೂ ಅಲ್ಲ, ಪಕ್ಷ ಬಲಪಡಿಸುವ ಉದ್ದೇಶ ಮಾತ್ರ, ಎಂದು ಸ್ಪಷ್ಟಪಡಿಸಿದರು.

ಸಭೆಯ ಆಯೋಜಕ, ಕುಣಿಗನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹೇಗ್ಗಾವೆ ಪುಟ್ಟರಾಜೇಗೌಡ ಮಾತನಾಡಿ, ಈ ಸಭೆ ಕೇವಲ ಬೆಳಗೋಡು ಹೋಬಳಿ ಜಿಲ್ಲಾ ಪಂಚಾಯಿತಿ ಮಟ್ಟದ ಮುಖಂಡರಿಗೆ ಸೀಮಿತವಾಗಿರುವುದರಿಂದ ಆ ವ್ಯಾಪ್ತಿಯವರನ್ನೇ ಆಹ್ವಾನಿಸಲಾಗಿದೆ ಎಂದು ತಿಳಿಸಿದರು. ಇದು ಯಾವುದೇ ಭಿನ್ನಮತ ಅಥವಾ ಅಸಮಾಧಾನ ಹುಟ್ಟುಹಾಕುವ ಸಭೆಯಲ್ಲ. ಪಕ್ಷ ಸಂಘಟನೆಯ ದೃಷ್ಟಿಯಿಂದಲೇ ಸಭೆ ನಡೆಸಲಾಗಿದೆ.

ಮುಂದಿನ ಸಭೆಗೆ ಮುಖಂಡರ ಅಭಿಪ್ರಾಯ ಪಡೆದು, ಪರಾಜಿತ ಅಭ್ಯರ್ಥಿ ಸೇರಿದಂತೆ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗಲಾಗುವುದು ಎಂದು ಹೇಳಿದರು.

ಮುಖಂಡರಾದ ದೊಡ್ಡದೀಣೆ ಮಂಜೇಗೌಡ, ಹೆಗ್ಗಾವೆ ಗೋಪಾಲಸ್ವಾಮಿ, ಭಾಗೆ ನೀಲಕಂಠಗೌಡ, ಬೆಳಗೋಡು ಗ್ರಾ.ಪಂ ಅಧ್ಯಕ್ಷ ಭುವನಾಕ್ಷ, ಕುಣಿಗನಹಳ್ಳಿ ಗ್ರಾ.ಪಂ ಅಧ್ಯಕ್ಷೆ ತಾರಾ ಮಹೇಶ್, ವಡ್ಡರಳ್ಳಿ ರಾಜಣ್ಣ, ಸಾವುಲ್ ಹಮೀದ್, ನಾಗರಾಜ್, ದಿನೇಕೆರೆ ಶೇಖರ್, ಪ್ರೇಮ್ ಹಾಗೂ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-17

1903: ರೈಟ್ ಸಹೋದರರು (ವಿಲ್ಬರ್ ಮತ್ತು ಓರ್ವಿಲ್ ರೈಟ್) ಮೊದಲ ಯಶಸ್ವಿ ವಿಮಾನ ಹಾರಾಟ ನಡೆಸಿದರು.

1938: ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ ಶಿವರಾಮ ಕಾರಂತ ಅವರಿಗೆ ಜ್ಞಾನಪೀಠ ಪ್ರಶಸ್ತಿ ಘೋಷಣೆ.

1989: ರೊಮೇನಿಯಾದಲ್ಲಿ ಕಮ್ಯೂನಿಸ್ಟ್ ಆಡಳಿತದ ವಿರುದ್ಧ ಜನಾಂದೋಲನ ಆರಂಭ.

1993: ಭಾರತದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಗೆ ವೇಗ ಸಿಕ್ಕಿತು.

2014: ಪಾಕಿಸ್ತಾನದ ಪೇಶಾವರ ಶಾಲಾ ದಾಳಿ ಬಳಿಕ ದೇಶವ್ಯಾಪಿ ತೀವ್ರ ಭದ್ರತಾ ಕ್ರಮಗಳು ಜಾರಿಯಾದವು.


### ಜನನ

1936: ಪೋಪ್ ಫ್ರಾನ್ಸಿಸ್ (ಜಾರ್ಜ್ ಮಾರಿಯೋ ಬೆರ್ಗೋಲಿಯೊ)

### ಮರಣ

2011: ಕಿಮ್ ಜಾಂಗ್‌ಇಲ್, ಉತ್ತರ ಕೊರಿಯಾದ ಮಾಜಿ ನಾಯಕ

# ಜಿಎನ್‌ಎ ಇಂಡಿಯಾಗೆ ಹರ್ಭಜನ್ ಸಿಂಗ್ ರಾಯಭಾರಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ಬೆಂಗಳೂರು ಮೂಲದ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆಯಾದ ಜಿಎನ್‌ಎ ಇಂಡಿಯಾ ಪ್ರೈವೇಟ್ ಲಿಮಿಟೆಡ್ ದೇಶಾದ್ಯಂತ ಸಾರ್ವಜನಿಕ ವೈ-ಫೈ ಸೇವೆ ವಿಸ್ತರಿಸಲು ಮುಂದಾಗಿದ್ದು ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ.

ಗ್ರಾಮೀಣ ಪ್ರದೇಶ, ಪ್ರವಾಸಿ ತಾಣ, ದೂರದ ಮತ್ತು ಸಂಪರ್ಕ ಸೌಲಭ್ಯ ಕಡಿಮೆ ಇರುವ ಪ್ರದೇಶಗಳಲ್ಲಿ ವೇಗವಾದ ಹಾಗೂ ವಿಶ್ವಾಸಾರ್ಹ ಇಂಟರ್ನೆಟ್ ಸಂಪರ್ಕ ಒದಗಿಸುವ ಮೂಲಕ ಡಿಜಿಟಲ್ ಅಂತರ ಕಡಿಮೆ ಮಾಡುವುದು ಜಿಎನ್‌ಎ ಗುರಿಯಾಗಿದೆ.

ಜಿಎನ್‌ಎ ಇಂಡಿಯಾದ ಪ್ರಮುಖ ಯೋಜನೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಿದ್ದು ಸಂವಹನ, ಡಿಜಿಟಲ್ ಪಾವತಿ ಮತ್ತು ಹಣಕಾಸು ವ್ಯವಹಾರಗಳಿಗೆ ಭದ್ರತೆಯನ್ನು ಒದಗಿಸುತ್ತದೆ. ಜಾಗತಿಕ ಮಟ್ಟದ ಗಣಿತಜ್ಞರು ಮತ್ತು ಕ್ರಿಪ್ಟೋಗ್ರಾಫರ್‌ಗಳು ಈ ತಂತ್ರಜ್ಞಾನವನ್ನು ವಿನ್ಯಾಸಗೊಳಿಸಿದ್ದಾರೆ.

ಯೋಜನೆ ಡಿಜಿಟಲ್ ಇಂಡಿಯಾ ಅಭಿಯಾನದೊಂದಿಗೆ ಹೊಂದಿಕೆಯಾಗಿದ್ದು, 2023ರ ಅ. 2023ರಿಂದ ಬಿಎಸ್‌ಎನ್‌ಎಲ್ ಮೂಲಕ ಪೈಲಟ್ ಪ್ರಾಜೆಕ್ಟ್ ಆಗಿ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ಜನವರಿ 2024ರಲ್ಲಿ ಅಧಿಕೃತ ಸಾರ್ವಜನಿಕ ವೈ-ಫೈ ಪಾಲುದಾರ ಒಪ್ಪಂದ ಮಾಡಿಕೊಂಡಿದೆ.

ಸರ್ಕಾರ ಹಾಗೂ ಸಾರ್ವಜನಿಕ ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ ಸುರಕ್ಷಿತ, ಸುಲಭ ಮತ್ತು ಸಮಾನ ಡಿಜಿಟಲ್ ಸಂಪರ್ಕವನ್ನು ಎಲ್ಲರಿಗೂ ಒದಗಿಸುವ ದಿಶೆಯಲ್ಲಿ ಸಂಸ್ಥೆ ಕಾರ್ಯನಿರ್ವಹಿಸಲಿದೆ.

ಈ ಕುರಿತು ಜಿಎನ್‌ಒ ಇಂಡಿಯಾ ಪ್ರತಿನಿಧಿ ಮಾತನಾಡಿ, ಡಿಜಿಟಲ್ ಭಾರತ ನಿರ್ಮಾಣದಲ್ಲಿ ಸುರಕ್ಷಿತ ಸಂಪರ್ಕ ವ್ಯವಸ್ಥೆ ಬಹಳ ಮುಖ್ಯ. ನಿತ್ಯದ ಡಿಜಿಟಲ್ ವ್ಯವಹಾರಗಳಿಗೆ ಕ್ವಾಂಟಂ ಮಟ್ಟದ ಭದ್ರತೆ ಒದಗಿಸುವುದು ನಮ್ಮ ಉದ್ದೇಶವಾಗಿದೆ ಎಂದರು. ರಾಯಭಾರಿ ಹರ್ಭಜನ್ ಸಿಂಗ್ ಮಾತನಾಡಿ, ಡಿಜಿಟಲ್ ಸಂಪರ್ಕ ಇಂದು ಪ್ರತಿಯೊಬ್ಬರ ಜೀವನದ ಭಾಗವಾಗಿದೆ. ಸುರಕ್ಷಿತ ಹಾಗೂ ಸಮಾನ ಡಿಜಿಟಲ್ ಪ್ರವೇಶಕ್ಕೆ ಕೆಲಸ ಮಾಡುತ್ತಿರುವ ಜಿಎನ್‌ಎ ಇಂಡಿಯಾ ಜೊತೆ ಕೈಜೋಡಿಸಿರುವುದು ಹೆಮ್ಮೆಯ ವಿಷಯ ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248